ಕರ್ನಾಟಕ ಸರ್ಕಾರ

(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ:Comp/09/2003-04

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಶಿಂಷಾ ಭವನ, ನಂ.720, 8ನೇ ಬ್ಲಾಕ್,
46ನೇ ಅಡ್ಡ ರಸ್ತೆ, ಸಂಗಮ್ ಸರ್ಕಲ್,
ಜಯನಗರ, ಬೆಂಗಳೂರು-82.
ದಿನಾಂಕ:27-11-2010.

## ಗಣಕೀಕರಣ ಸುತ್ತೋಲೆ ಸಂಖ್ಯೆ: 18

ವಿಷಯ: ಡಾಟಾ ಎಂಟ್ರಿ ತಪ್ಪುಗಳಿಗೆ ಹಾಗೂ ತಪ್ಪಾಗಿ ಸ್ಕ್ಯಾನ್ ಮಾಡುವುದಕ್ಕೆ ಜುಲ್ಮಾನೆ (Fine) ದಂಡ ವಿಧಿಸುವ ಕುರಿತು.

ಉಲ್ಲೇಖ: ನೋಮಪ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 28-10-2010 ರಂದು ಜರುಗಿದ ಸಭೆ ನಡವಳಿ.

********

ಇಲಾಖೆಯ ಎಲ್ಲಾ ಉಪ-ನೋಂದಣಿ/ಜಿಲ್ಲಾ ನೋಂದಣಿ ಕಛೇರಿಗಳಲ್ಲಿ ಸಂಪೂರ್ಣ ಗಣಕೀಕರಣವನ್ನು 2003-04 ನೇ ಸಾಲಿನಿಂದ ಜಾರಿಗೆ ತರಲಾಗಿದ್ದರೂ ಸಹ ದಸ್ತಾವೇಜು/ವಿವಾಹ/ಫರ್ಮ ನೋಂದಣಿ ಸಂದರ್ಭದಲ್ಲಿ ಅನೇಕ ರೀತಿಯ ಡಾಟಾ ಎಂಟ್ರಿ ತಪ್ಪುಗಳು ಹಾಗೂ ಸ್ಕ್ಯಾನಿಂಗ್ ತಪ್ಪುಗಳು ಅವ್ಯಾಹತವಾಗಿ ಮುಂದುವರಿಯುತ್ತಿರುವುದನ್ನು ಗಮನಿಸಲಾಗಿದೆ.

ಈ ರೀತಿಯ ತಪ್ಪುಗಳಿಂದಾಗಿ ಸಾರ್ವಜನಿಕರಿಗೆ ಅಪಾರ ತೊಂದರೆಯಾಗುತ್ತಿದ್ದು ಅವುಗಳನ್ನು ಸರಿಪಡಿಸಲು ಸಾರ್ವಜನಿಕರು ಉಪ-ನೋಂದಣಿ ಕಛೇರಿ/ಜಿಲ್ಲಾ ನೋಂದಣಿ ಕಛೇರಿ/ಕೇಂದ್ರ ಕಛೇರಿಗಳಿಗೆ ಅಲೆದಾಡುವಂತಾಗಿರುತ್ತದೆ.

ಸದರಿ ತಪ್ಪುಗಳನ್ನು ಸರಿಪಡಿಸುವಲ್ಲಿ ಉಪ-ನೋಂದಣಿ/ಜಿಲ್ಲಾ ನೋಂದಣಿ/ಕೇಂದ್ರ ಕಛೇರಿಯಲ್ಲಿ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಾಕಷ್ಟು ಸಮಯ ವ್ಯರ್ಥವಾಗುತ್ತಿರುವುದಲ್ಲದೇ ಆ ಸಂಬಂಧವಾಗಿ ಮಾಡುವ ಪತ್ರ ವ್ಯವಹಾರ ಹಾಗೂ ಆದೇಶಗಳಿಗಾಗಿ ಪೇಪರು, ಪ್ರಿಂಟರ್, ಟೋನರ್ ಇತ್ಯಾದಿಯಾಗಿ ಹಲವು ಸ್ಟೇಶನರಿ ಸಾಮಗ್ರಿಗಳು ವ್ಯಯವಾಗುತ್ತಿವೆ. ಇದರಿಂದ ಸರ್ಕಾರಕ್ಕೆ ಅನಾವಶ್ಯಕವಾಗಿ ಖರ್ಚುವೆಚ್ಚ ಉಂಟಾಗುತ್ತಿದೆ. ಈ ಎಲ್ಲಾ ಉಪದ್ರವಗಳನ್ನು ನಿವಾರಿಸಲು ಹಾಗೂ ತಪ್ಪುಗಳ ಪುನಾರವರ್ತನೆಯನ್ನು ತಡೆಯುವುದು ಅತ್ಯಾವಶ್ಯಕವಿರುತ್ತದೆ.

ಈ ಸಂಬಂಧವಾಗಿ ಗುತ್ತಿಗೆದಾರರ ಆಪರೇಟರವರುಗಳು ಎಸಗುವ ಡಾಟಾ ಎಂಟ್ರಿ ಹಾಗೂ ಸ್ಕ್ಯಾನಿಂಗ್ ತಪ್ಪುಗಳಿಗೆ ಜುಲ್ಮಾನೆ (Fine) ವಿಧಿಸುವುದು ಹಾಗೂ Document summary Report ಗಳನ್ನು ಸರಿಯಾಗಿ ಪರಿಶೀಲಿಸದಿರುವ ಇಲಾಖೆಯ ಸಿಬ್ಬಂದಿಯವರುಗಳ ವಿರುದ್ಧ ಶಿಸ್ತು ಕ್ರಮ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಈ ವಿಷಯವಾಗಿ ಕಾವೇರಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಮೆ|| ECIL ಹಾಗೂ ಮೆ||CMS ಕಂಪ್ಯೂಟರ್ಸ್ ಪ್ರೈ.ಲಿ ಬೆಂಗಳೂರು ಇವರೊಂದಿಗೆ ದಿನಾಂಕ:28-10-2010ರಂದು ಸಭೆ ಸೇರಿ ಚರ್ಚಿಸಿ ಕೆಳಕಂಡಂತೆ ಜುಲ್ಮಾನೆ (Fine) ವಿಧಿಸಲು ಒಮ್ಮತದ ತೀರ್ಮಾನ ಕೈಗೊಳ್ಳಲಾಗಿರುತ್ತದೆ.

I. ಗುತ್ತಿಗೆದಾರರ ಆಪರೇಟರವರುಗಳು ಮಾಡುವ ತಪ್ಪುಗಳಿಗೆ ವಿಧಿಸುವ ಜುಲ್ಮಾನೆ (Fine) ವಿವರ

| ತಪ್ಪುಗಳ ವಿವರ | - | ಜುಲ್ಮಾನೆ (Fine) ಪ್ರಮಾಣ |
|---|---|---|
| a) ನೋಂದಾಯಿಸಲ್ಪಡುವ ಪ್ರತಿಯೊಂದು. ದಸ್ತಾವೇಜು/ವಿವಾಹ/ಫರ್ಮಗಳ ನೋಂದಣಿ ಸಂಬಂಧವಾಗಿ ಆಪರೇಟರವರು ಎಸಗುವ ಡಾಟಾ ಎಂಟ್ರಿ ತಪ್ಪುಗಳಿಗೆ | - | ರೂ.500/- ಕಡಿತ |
| b) ನೋಂದಾಯಿಸಲ್ಪಡುವ ಪ್ರತಿಯೊಂದು ದಸ್ತಾವೇಜು/ವಿವಾಹ/ಫರ್ಮಗಳ ನೋಂದಣಿ ಸಂಬಂಧವಾಗಿ ಆಪರೇಟರವರು ಎಸಗುವ ಸ್ಕ್ಯಾನಿಂಗ್ ತಪ್ಪುಗಳಿಗೆ | - | ರೂ.500/- ಕಡಿತ |

ಷರಾ: ಮೇಲ್ಕಂಡಂತೆ ವಿಧಿಸಲಾಗುವ ಜುಲ್ಮಾನೆಯನ್ನು (Fine) ಮೆ||ECIL/ಮೆ||CMS ಕಂಪ್ಯೂಟರ್ಸ್ ಪ್ರೈ ಲಿ ಇವರುಗಳಿಗೆ ಪಾವತಿಸಲಾಗುವ ಮಾಸಿಕ ನಿರ್ವಹಣಾ ವೆಚ್ಚದ ಬಿಲ್‌ಗಳಲ್ಲಿ ಕಡಿತಗೊಳಿಸುವ ಮೂಲಕ ವಸೂಲಾಯಿಸಲಾಗುವುದು.

II. Document Summary Report ಗಳನ್ನು ಸರಿಯಾಗಿ ಪರಿಶೀಲಿಸದೇ ಇರುವ ಉಪ-ನೋಂದಣಾದಿಕಾರಿ/ಜಿಲ್ಲಾ ನೋಂದಣಾಧಿಕಾರಿ ಕಛೇರಿಯ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ

| | | |
|---|---|---|
| ದ್ವಿದಸ/ಪ್ರದಸ/ಉಪ-ನೋಂದಣಾಧಿಕಾರಿ/ ಜಿಲ್ಲಾ ನೋಂದಣಾಧಿಕಾರಿರವರುಗಳಿಗೆ | - | ಕರ್ನಾಟಕ ನಾಗರೀಕ ನಿಯಮಗಳು 1957 ರನ್ವಯ ಶಿಸ್ತು ಕ್ರಮ ಜಾರಿಗೊಳಿಸಲಾಗುವುದು |

ಈ ಮೇಲ್ಕಂಡ ಜುಲ್ಮಾನೆಗಳು(Fines) ದಿನಾಂಕ: 01-12-2010 ರಿಂದ ಜಾರಿಗೆ ಬರುತ್ತವೆ.

ಜಿಲ್ಲಾನೋಂದಣಾಧಿಕಾರಿರವರು/ಕೇಂದ್ರ ಸ್ಥಾನಿಕ ಸಹಾಯಕರವರು ಉಪನೋಂದಣಾಧಿಕಾರಿ ಕಛೇರಿಗಳ ತಪಾಸಣಾ ಸಂಧರ್ಭದಲ್ಲಿ ಮೇಲ್ಕಂಡಂತಹ ತಪ್ಪುಗಳನ್ನು ಪರಿಶೀಲಿಸಿ ತಪಾಸಣಾ ವರದಿಗಳಲ್ಲಿ ನಮೂದಿಸಲು ಹಾಗೂ ಜುಲ್ಮಾನೆ (Fine) ವಸೂಲಾತಿಗಾಗಿ/ಶಿಸ್ತು ಕ್ರಮ ಜಾರಿಗೊಳಿಸಲು ಸದರಿ ಪ್ರಕರಣಗಳ ಬಗ್ಗೆ ವರದಿಯನ್ನು ಕೇಂದ್ರ ಕಛೇರಿಯ ಗಣಕೀರಣ ಶಾಖೆಗೆ ಕೂಡಲೇ ಸಲ್ಲಿಸಲು ಸೂಚಿಸಿದೆ.

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಇವರಿಗೆ,

1) ರಾಜ್ಯದ ಎಲ್ಲಾ ಉಪ-ನೋಂದಣಾಧಿಕಾರಿ/ಜಿಲ್ಲಾ ನೋಂದಣಾಧಿಕಾರಿರವರುಗಳಿಗೆ
2) ಮೆ||ECIL ಬೆಂಗಳೂರು
3) ಮೆ||CMS ಕಂಪ್ಯೂಟರ್ಸ್ ಪ್ರೈ ಲಿ
4) ಸಂಕಲನಕಾರರು - ಕರ್ನಾಟಕ ರಾಜ್ಯ ಪತ್ರ-ಈ ಸುತ್ತೋಲೆಯನ್ನು ಮುಂದಿನ ಸಂಚಿಕೆಯ ರಾಜ್ಯ ಪತ್ರದಲ್ಲಿ ಪ್ರಕಟಪಡಿಸಿ 300 ಪ್ರತಿಗಳನ್ನು ಪೂರೈಸಲು ಕೋರಿದೆ.